ತೋಚುತ್ತಿದೆ. ತುಂಬಾ ಹಸಿವಾಗುತ್ತಿದೆ ಅಣ್ಣಾ... ಇಷ್ಟು ದಿನ ಬರಿಗಾಳಿ ಕುಡಿದೇ ಬದುಕಿ ಬಂದೆವೇನೋ... ಏನಾದರೂ ತಿನ್ನಬೇಕು ಅನಿಸುತ್ತಿದೆ ಅಣ್ಣಾ' ಎಂದು ಸುತ್ತಮುತ್ತ ಕಣ್ಣಾಡಿಸಿದ್ದಕ್ಕೂ ಅವರ ಗಾಡಿ ಜೀವ ಬಿಡುವುದಕ್ಕೂ ಲೆಕ್ಕಾಚಾರ ಕೂಡಿ ಬಂದು ಎಂಜಿನ್ ಸದ್ದಡಗಿತು. ಏನು ಮಾಡಿದರೂ ಜಗ್ಗಲಿಲ್ಲ. ಮೂರು ದಿನಗಳ ಕಾಲ ಸವಾರ ತನ್ನೆಲ್ಲ ತಿಳಿವಳಿಕೆಯನ್ನು ಸಾವಿನ ಜೊತೆ ಪಣಕ್ಕಿಟ್ಟು ಇಡೀ ಗಾಡಿಯ ಅಂಗಾಂಗಳ ಬಿಚ್ಚಿದ. ಅವರನ್ನು ಹೊತ್ತು ತಂದಿದ್ದ ವಾಹನವೆಲ್ಲ ಕಳಚಿಕೊಂಡು ಅಸ್ಥಿಪಂಜರದಂತೆ ಬಿದ್ದಿತ್ತು. ಅವರ ತಲೆ ಕೆಟ್ಟು ಹೋಗಿತ್ತು.

'ಅಣ್ಣಾ; ಅಲ್ಲೇನೊ ಹಸಿರು ಕಾಣುತ್ತಿದೆ... ತಿನ್ನಲು ಏನಾದರೂ ಸಿಗಬಹುದು. ಹೋಗಿ ಬರುವೆ' ಎನ್ನುತ್ತಾ ಅತ್ತ ಒಂದು ದೊಣ್ಣೆಯ ಆಸರೆಯಿಂದ ಕುಂಟುತ್ತಾ ನಡೆದ. ಕಣ್ಣಿಗೆ ಹತ್ತಿರವಿತ್ತಷ್ಟೇ... ಮರೀಚಿಕೆ ಇರಬೇಕು... ನೋಡೇ ಬಿಡುವ ಎಂದು ಹಸಿದು ಒಣಗಿದ ಗಂಟಲಲ್ಲಿ ಜೀವ ಹಿಡಿದುಕೊಂಡು ಹತ್ತಿರ ಹೋದ. ಅಹಾ ಎಂತಹ ಪರಮ ಅಚ್ಚರಿ. ಅಲ್ಲೊಂದು ಸರೋವರ. ಥರಾವರಿ ಬಣ್ಣದ ಹಕ್ಕಿಗಳು. ಸ್ವರ್ಗದಂತಿತ್ತು. ಇನ್ನೂ ಸಮೀಪ ಹೋದ. ಓಹ್ ಈ ಮರುಭೂಮಿಯಲ್ಲಿ ಇದೇನಿದು ಇಂತಿಂಥ ಹಣ್ಣಿನ ಬಯಲು. ಈ ಸರೋವರವೇ ಬೆಳೆಸಿರಬೇಕು ಎಂದು ಮುನ್ನುಗ್ಗಿ ಆ ದೊಡ್ಡಗಾತ್ರದ ಕರಬೂಜ, ಕಲ್ಲಂಗಡಿ ಹಣ್ಣುಗಳ ಬಾಚಿ ತಬ್ಬಿಕೊಂಡು ಗಬಗಬನೆ ತಿಂದ. ಪನ್ನೀರ ಕುಡಿದ. 'ಅಣ್ಣಾ; ಬಾರಣ್ಣಾ' ಎಂದು ಕೂಗಿದ. ಸಾಕಷ್ಟು ದೂರ ಇತ್ತು. ಕೇಳಿಸಲಿಲ್ಲ. ಹೆಸರರಿಯದ ಎಷ್ಟೋ ಹಣ್ಣುಗಳು ಬಳ್ಳಿಬಳ್ಳಿಯಾಗಿ ಸರೋವರದ ದಂಡೆಯಲ್ಲಿ ಹಬ್ಬಿಕೊಂಡು ಮಲಗಿದ್ದವು. ಹಣ್ಣುಗಳ ತಿಂದ ಕೂಡಲೇ ಅವನ ಜೀವ ಪ್ರಜ್ವಲಿಸಿತು. ಒಂದಷ್ಟು ಹಣ್ಣುಗಳ ಕಿತ್ತುಕೊಂಡು ತಂದು ಸವಾರನ ಮುಂದಿಟ್ಟ. 'ಏನು ಮಾಯಾ ಮಾಡಿ ತಂದೆಯೋ' ಎಂದು ಕೇಳಿದ.

'ಅಣ್ಣಾ... ನನ್ನ ಹಸಿವೆಲ್ಲ ಒಂದೆರಡು ಹಣ್ಣುಗಳ ತಿಂದ ಕೂಡಲೇ ಸತ್ತು ಹೋಯಿತು; ನೀನು ತಿನ್ನಣ್ಣ' ಎಂದು ಕೊಟ್ಟ. 'ನಾವಿಬ್ಬರೇ ತಿನ್ನಬೇಕೇ... ನಮ್ಮ ಜೊತೆ ಬೇರೆ ಇನ್ನಾರಾದರೂ ಸೇರಿ ತಿನ್ನುವಂತಿದ್ದರೆ ಎಷ್ಟು ಸುಖ ಇತ್ತಲ್ಲಾ...' ಎನ್ನುತ್ತಾ ಸವಾರ ಒಂದೇ ಗಳಿಗೆಯಲ್ಲಿ ತಿನ್ನುತ್ತಾ, 'ಇದು ನಮ್ಮ ಕೊನೆಯ ಭೋಜನವಿರಬೇಕು' ಎಂದ. 'ಇರಬಹುದು... ಆ ಯೇಸು ತಾನು ಸಾಯುವ ಮುನ್ನ ತನ್ನ ಶಿಷ್ಯರ ಜೊತೆ ಕೊನೆಯದಾಗಿ ಒಂದು ತುಂಡು ಬ್ರೆಡ್ಡು ತಿಂದ. ಆಮೇಲೆ ಅವನನ್ನು ಸಂಚಿನಲ್ಲಿ ಕೊಂದುಬಿಟ್ಟರು... ಮನುಷ್ಯ ನರಭಕ್ಷಕ ಮಾತ್ರವಲ್ಲ; ಆತ ದೇವಭಕ್ಷಕನೂ ಆಗಿದ್ದಾನೆ... ಅದೆಲ್ಲ ಅತ್ತ ಇರಲಿ; ಬಾರಣ್ಣಾ; ಅಲ್ಲಿ ಹೋಗಿ ಇನ್ನಷ್ಟು ಹಣ್ಣು ತಿನ್ನುವ' ಎಂದ.

'ನಾವು ತಿಂದರೆ ಸಾಕೇ... ಹಸಿದವರು ಈ ಲೋಕದಲ್ಲಿ ಎಷ್ಟೊಂದು ಜನ ಇದ್ದಾರಲ್ಲಾ... ಅವರ ಹಸಿವು ತೀರುವುದೆಂದು. ಈ ದಾರಿಯಲ್ಲಿ ಯಾರೋ ಅಪರೂಪಕ್ಕೆ ಅಡ್ಡಾಡಿದಂತಿದೆ. ನಾವಿಲ್ಲೇ ಇನ್ನೇನಾದರೂ ಮಾಡಬಹುದು ಎನಿಸುತ್ತಿದೆ. ಏನು ಮಾಡುವಾ...'

ಮೊದಲು ಈ ನಿನ್ನ ಶವದ ವಾಹನವ ಒಂದು ಪುಟ್ಟ ಗೂಡಾಗಿ ಪರಿವರ್ತಿಸು. ಆಮೇಲೆ... ಅದೇ ಆ ಹಣ್ಣಿನ ಸರೋವರಕ್ಕೆ ಹೋಗುವ, ತರತರದ ಚೆಂದದ ಹಣ್ಣುಗಳ ತರುವ. 'ಆಮೇಲೆ... ಆಮೇಲೆ ಏನೂ... ಹಣ್ಣುಗಳ ತಿನ್ನಲು ಈ ದಾರಿಯಲ್ಲಿ ಯಾರಾದರೂ ಬಂದೇ ಬರುತ್ತಾರೆ ಅಣ್ಣಾ...' 'ಹೌದಾ ಬರ್ತಾರಾ!' 'ಬಂದೇ ಬರ್ತಾರಣ್ಣಾ... ಹಸಿದವರು ಒಂದೆಡೆ ಕೂರುವುದಿಲ್ಲ, ಸಾಯುವುದಿಲ್ಲ. ಅವರು ದಾರಿ ಹುಡುಕ್ತಾನೆ ಇರ್ತಾರೆ.' ಇದ್ದಕ್ಕಿದ್ದಂತೆ ಅವರ ನಡುವೆ ದಿವ್ಯವಾದ ಮೌನ ಆವರಿಸಿತು. ಮಾಯಾವಿಯಂತೆ ಆ ವಾಹನದ ಬಿಡಿ ಭಾಗಗಳನ್ನೆಲ್ಲ ಮತ್ತೆ ಬೇರೊಂದು ರೂಪಕ್ಕೆ ಬದಲಿಸಿ ಬದುಕಲು ಒಂದು ಗೂಡು ಮಾಡಿಕೊಂಡರು. ಅವರ ಮುಂದೆಯೇ ದಾರಿ ಒಂದು ಮೂಡಿತ್ತು. ಇನ್ನು ಇಲ್ಲೇ ಕಾಯುತ್ತಿರುವ. ದಣಿದು ದಿಕ್ಕೆಟ್ಟು ಬಂದವರಿಗೆ ಈ ಹಣ್ಣುಗಳ ತಿನ್ನಿಸೋಣ...'

'ಹೌದಣ್ಣಾ... ಇನ್ನು ಮುಂದೆ ಇದೇ ನಮ್ಮ ಕಾಯಕವಾಗಲಿ' ಎಂದು ಹಣ್ಣುಗಳ ತಂದು ಚೆಂದ ಚೆಂದ ಬಿಡಿಸಿ ಅಂದವಾಗಿ ಜೋಡಿಸಿಟ್ಟು ಕಾದು ಕುಳಿತರು.

ರಣಬಿಸಿಲು ತಣತಣಿಸುತ್ತಿತ್ತು. ಯಾರೋ ಬರುತ್ತಿರುವಂತೆ ಕಂಡು ಕಂಡು ಮಾಯವಾದಂತೆ ಭಾಸವಾಗುತ್ತಿತ್ತು. ಅಚಲ ವಿಶ್ವಾಸದಲ್ಲಿ ಅವರು ಕಾಯುತ್ತಲೇ ಇದ್ದರು. ●